ನಿಸ್ಸಂದೇಹ

# ನೂತನ ಶಿಕ್ಷಣ ನೀತಿ: ಆತುರ ಸಲ್ಲ ಇದು ಪ್ರಯೋಗದ ಸಮಯವಲ್ಲ

ಕೊರೊನಾ ಕಾರಣದಿಂದಾಗಿ ಮಕ್ಕಳ ಕಲಿಕೆಯ ಅವಕಾಶಗಳು ಕುಂಠಿತಗೊಂಡಿವೆ. ಶಾಲೆಗಳು ಯಾವಾಗ ಸಹಜ ಸ್ಥಿತಿಗೆ ಬರಲಿವೆ ಎನ್ನುವುದನ್ನು ಊಹಿಸುವುದು ಯಾರಿಗೂ ಸಾಧ್ಯವಾಗುತ್ತಿಲ್ಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ, ನೂತನ ಶಿಕ್ಷಣ ನೀತಿಯ ಪ್ರಯೋಗಶಾಲೆಯನ್ನಾಗಿ ಕರ್ನಾಟಕವನ್ನು ಬಳಸಿಕೊಳ್ಳಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರ ದುಡುಕಿನದಾಗಿದೆ.



ಶಿಕ್ಷಣ ಕ್ಷೇತ್ರದ ಬುನಾದಿ ಅಲ್ಲಾಡುತ್ತಿರುವ ಕೊರೊನಾ ಕಾಲಘಟ್ಟದಲ್ಲಿ ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿ’ಯನ್ನು ಜಾರಿಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉತ್ಸುಕವಾಗಿವೆ. ಇದು, ನೀರಿಳಿಯದ ಗಂಟಲಿನಲ್ಲಿ ಕಡುಬು ತುರುಕುವ ಪ್ರಯತ್ನದಂತಿದೆ. ಹೊಸ ನೀತಿಯಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಲಿದ್ದು, ಪ್ರತಿಯೊಂದು ಮಗುವೂ ತಾನು ಇಷ್ಟಪಟ್ಟಿದ್ದನ್ನು ಕಲಿಯುವುದು ಸಾಧ್ಯವಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಸರ್ಕಾರದ ಉದ್ದೇಶ ಒಳ್ಳೆಯದೇ. ಯಾವುದೇ ಕ್ಷೇತ್ರದಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಆಗುವುದು ಅಗತ್ಯ. ಹೊಸ ನೀರು ಹರಿಯಲು, ಹೊಸ ವಿಚಾರಗಳು ಸೇರಿಕೊಳ್ಳಲು ಬದಲಾವಣೆ ಅಗತ್ಯ. ಆದರೆ, ಈ ಬದಲಾವಣೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಾವಧಾನದಿಂದ ಆಗಬೇಕೇ ಹೊರತು, ತರಾತುರಿಯಲ್ಲಲ್ಲ.

ಬದಲಾವಣೆಯ ಸಂದರ್ಭದಲ್ಲಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದವರಿಂದ ಹಿಂಜರಿಕೆ ಹಾಗೂ ವಿರೋಧ ವ್ಯಕ್ತವಾಗುವುದು ಸಹಜ. ಅಂಥ ವಿರೋಧ ‘ರಾಷ್ಟ್ರೀಯ ಶಿಕ್ಷಣ ನೀತಿ’ಗೆ ಸಂಬಂಧಿಸಿದಂತೆಯೂ ವ್ಯಕ್ತವಾಗಿದೆ. ಹೊಸ ನೀತಿಯಿಂದಾಗಿ ಶಿಕ್ಷಣದ ಖಾಸಗೀಕರಣಕ್ಕೆ ಉತ್ತೇಜನ ದೊರೆಯಲಿದ್ದು, ಕೇಂದ್ರೀಕೃತ ವ್ಯವಸ್ಥೆ ರೂಪುಗೊಳ್ಳಲಿದೆ; ಕೇಸರೀಕರಣದ ಬಣ್ಣಗಳೂ ಹೊಸ ಶಿಕ್ಷಣ ನೀತಿಯಲ್ಲಿವೆ ಎನ್ನಲಾಗಿದೆ. ಈ ಆರೋಪಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಶಿಕ್ಷಣ ನೀತಿಗೆ ಸಂಬಂಧಿಸಿದ ಗೊಂದಲ ಮತ್ತು ಪ್ರಶ್ನೆಗಳನ್ನು ಬಗೆಹರಿಸುವ ಕೆಲಸವನ್ನು ಮಾಡಬೇಕಾಗಿದೆ.

ಹೊಸ ಶಿಕ್ಷಣ ನೀತಿಯಲ್ಲಿನ ಕೆಲವು ವಿರೋಧಾಭಾಸಗಳು ಮೇಲ್ನೋಟಕ್ಕೇ ಎದ್ದುಕಾಣುವಂತಿವೆ. ಕನ್ನಡವೂ ಸೇರಿದಂತೆ ಎಲ್ಲ ರಾಜ್ಯಭಾಷೆಗಳಿಗೆ ಶಿಕ್ಷಣ ನೀತಿಯಿಂದ ಅನುಕೂಲವಾಗಲಿದೆ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಳುತ್ತಿವೆ. ಇದು ಸಾಧ್ಯವಾದಲ್ಲಿ, ಕನ್ನಡದಂಥ ಭಾಷೆಗಳಿಗೆ ನೂತನ ಶಿಕ್ಷಣ ನೀತಿ ಹೊಸ ಚೈತನ್ಯ ತುಂಬಬಹುದು. ಆದರೆ, ಕಲಿಕೆಯ ಮಾಧ್ಯಮ ಯಾವುದಾಗಿರಬೇಕೆನ್ನುವ ನಿರ್ಧಾರ ಮಕ್ಕಳು ಮತ್ತು ಪೋಷಕರಿಗೆ ಸಂಬಂಧಿಸಿದ್ದು ಎಂದು ಸುಪ್ರೀಂ ಕೋರ್ಟ್‌ ಸ್ಪಷ್ಟವಾಗಿ ಹೇಳಿದೆ. ಹಾಗಾಗಿ, ಕಲಿಕೆಯ ಮಾಧ್ಯಮ ಯಾವುದಾಗಿರಬೇಕು ಎನ್ನುವುದರ ಬಗ್ಗೆ ಸುಪ್ರೀಂ ಕೋರ್ಟ್‌ ಮತ್ತು ಶಿಕ್ಷಣ ನೀತಿ ವಿರುದ್ಧ ಅಭಿಪ್ರಾಯಗಳನ್ನು ಹೊಂದಿವೆ ಎಂದಾಯಿತು. ಈ ವಿರೋಧಾಭಾಸ ಮುಂದಿನ ದಿನಗಳಲ್ಲಿ ದೊಡ್ಡ ಗೊಂದಲ ಸೃಷ್ಟಿಸಿದರೆ ಆಶ್ಚರ್ಯವೇನೂ ಇಲ್ಲ. ಸಂಪನ್ಮೂಲಗಳ ಲಭ್ಯತೆಗೆ ಸಂಬಂಧಿಸಿದಂತೆಯೂ ಪ್ರಶ್ನೆಗಳಿವೆ. ಪ್ರಸ್ತುತ ಶಿಕ್ಷಣ ಕ್ಷೇತ್ರಕ್ಕೆ ಜಿಡಿಪಿಯ ಶೇ 2.8ರಷ್ಟು ವಿನಿಯೋಗವಾಗುತ್ತಿದೆ. ನೂತನ ಶಿಕ್ಷಣ ನೀತಿ ಕಾರ್ಯ ನಿರ್ವಹಣೆಗೆ ಜಿಡಿಪಿಯ ಶೇ 6ರಷ್ಟು ಅನುದಾನ ಅಗತ್ಯ. ಇಷ್ಟು ದೊಡ್ಡ ಮೊತ್ತವನ್ನು ಸರ್ಕಾರ ಹೇಗೆ ಭರಿಸುತ್ತದೆ ಎನ್ನುವುದು ಸದ್ಯದ ಯಕ್ಷಪ್ರಶ್ನೆ. ಸಂಪನ್ಮೂಲಗಳನ್ನು ಭರಿಸಲಾಗದೆ ಸರ್ಕಾರ ಕೈಚೆಲ್ಲಿದಾಗ, ಶಿಕ್ಷಣ ಕ್ಷೇತ್ರ ಸಹಜವಾಗಿಯೇ ಖಾಸಗಿಯವರ ಕೈಗೆ ಹೋಗುತ್ತದೆ. ಈ ಅನುಮಾನ ನಿಜವಾದಲ್ಲಿ ಹೆಚ್ಚಿನ ಪೆಟ್ಟು ತಿನ್ನುವುದು ಗ್ರಾಮೀಣ ಭಾಗಗಳ, ವಲಸಿಗರ ಹಾಗೂ ಬಡವರ ಮಕ್ಕಳು.

ಪ್ರಸ್ತುತ ಕೊರೊನಾ ಸಂದರ್ಭ ಕೂಡ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಪ್ರಯೋಗಗಳಿಗೆ ಸೂಕ್ತವಾಗಿಲ್ಲ. ಹೊಸ ದಾಖಲಾತಿಗಳ ಸಂಖ್ಯೆ ಆತಂಕ ಹುಟ್ಟಿಸುವ ಪ್ರಮಾಣದಲ್ಲಿ ಕುಸಿದಿದೆ. ಕಳೆದ ಒಂದೂವರೆ ವರ್ಷದಿಂದ ಶಾಲೆಗಳು ತೆರೆಯದಿರುವುದರಿಂದ ಬಹಳಷ್ಟು ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯ ಕುಂಠಿತವಾಗಿದೆ. ಶುಲ್ಕಕ್ಕೆ ಸಂಬಂಧಿಸಿದಂತೆ, ಖಾಸಗಿ ಶಾಲೆಗಳ ಆಡಳಿತ ಮಂಡಳಿ ಮತ್ತು ಪೋಷಕರ ನಡುವಣ ಹಗ್ಗಜಗ್ಗಾಟ ಮುಂದುವರೆದಿದೆ. ಖಾಸಗಿ ಶಾಲೆಗಳ ಶಿಕ್ಷಕರ ಅತಂತ್ರದ ಬದುಕಿನ್ನೂ ಸ್ಥಿರತೆ ಕಂಡುಕೊಂಡಿಲ್ಲ. ತರಗತಿಗಳನ್ನು ಒಂದೊಂದಾಗಿ ಆರಂಭಿಸಲು ಸರ್ಕಾರ ಪ್ರಯತ್ನಿಸುತ್ತಿದ್ದರೂ, ಶಾಲೆಗಳು ಯಾವಾಗ ಸಹಜ ಸ್ಥಿತಿಗೆ ಬರಲಿವೆ ಎನ್ನುವುದನ್ನು ಊಹಿಸುವುದು ಯಾರಿಗೂ ಸಾಧ್ಯವಾಗುತ್ತಿಲ್ಲ. ವಾಸ್ತವ ಹೀಗಿರುವಾಗ, ನೂತನ ಶಿಕ್ಷಣ ನೀತಿಯ ಪ್ರಯೋಗಶಾಲೆಯನ್ನಾಗಿ ಕರ್ನಾಟಕವನ್ನು ಬಳಸಿಕೊಳ್ಳಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರ ದುಡುಕಿನದೆಂದೇ ಹೇಳಬೇಕಾಗುತ್ತದೆ.

ನೂತನ ಶಿಕ್ಷಣ ನೀತಿಗೆ ಸಂಬಂಧಿಸಿದ ಪ್ರಶ್ನೆ, ಅನುಮಾನ, ಗೊಂದಲಗಳನ್ನು ಬಗೆಹರಿಸಲು ಕೊರೊನಾ ಸಂದರ್ಭವನ್ನು ಸರ್ಕಾರ ಬಳಸಿಕೊಳ್ಳಬಹುದಿತ್ತು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡ ನಂತರ ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸಬಹುದಿತ್ತು. ‘ಶಿಕ್ಷಣ ನೀತಿ ವಿರೋಧಿಸುವುದು ದೇಶದ ಅಭಿವೃದ್ಧಿಯನ್ನು ವಿರೋಧಿಸಿದಂತೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್‌. ಅಶ್ವತ್ಥನಾರಾಯಣ ಹೇಳಿರುವುದನ್ನು ನೋಡಿದರೆ, ಸರ್ಕಾರಕ್ಕೆ ಸಂವಾದದಲ್ಲಿ ನಂಬಿಕೆ ಇರುವಂತೆ ಕಾಣುತ್ತಿಲ್ಲ. ನಾವು ಹೇಳುವುದನ್ನು ಉಳಿದವರು ಒಪ್ಪಿಕೊಳ್ಳಬೇಕು ಎನ್ನುವ ಧೋರಣೆ ಸರ್ವಾಧಿಕಾರಿ ಮನೋಭಾವದ್ದು. ಇತರರು ತನ್ನ ಮಾತನ್ನು ನಂಬಬೇಕೆಂದು ಅಪೇಕ್ಷಿಸುವ ಸರ್ಕಾರ, ಉಳಿದವರ ಮಾತುಗಳನ್ನೂ ಸಾವಧಾನದಿಂದ ಆಲಿಸಬೇಕು. ಪ್ರಜಾತಂತ್ರ ಎಂದರೆ ಅದೇ ತಾನೆ?

■ ರಘುನಾಥ ಚ.ಹ.